**ಜಿಲ್ಲಾಡಳಿತ ಬೆಳಗಾವಿ.** **ಸಮಾಜ ಕಲ್ಯಾಣ ಇಲಾಖೆ** **ಜಿಲ್ಲಾ ಪಂಚಾಯತ್,ಬೆಳಗಾವಿ.**

## ಪರಿಶಿಷ್ಟ ಜಾತಿ /ಪರಿಶಿಷ್ಟ ವರ್ಗಗಳ ಜನರ ಅಭಿವೃದ್ಧಿಗಾಗಿ ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳು.

| ಕ್ರ.ಸಂ. | ಯೋಜನೆಯ ಹೆಸರು | ವಿವರ |
|---|---|---|
| 1. | ವಿದ್ಯಾರ್ಥಿನಿಲಯಗಳು/ವಸತಿಶಾಲೆಗಳ ನಿರ್ವಹಣೆ. | 1 ರಿಂದ 5 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆಶ್ರಮಶಾಲೆಗಳು, 6 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳು, ಕಾಲೇಜು ಹಂತದಲ್ಲಿ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು ಹಾಗೂ 6ನೇತರಗತಿಯಿಂದ 10ನೇ ತರಗತಿಯ ವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಶ್ರೀ.ಮೊರಾರ್ಜಿ ದೇಸಾಯಿ ಮತ್ತು ಕಿತ್ತೂರು ರಾಣಿ ಚೆನ್ನಮ್ಮಾ ಮಾದರಿ ವಸತಿಶಾಲೆಗಳು ಕಾರ್ಯನಿರ್ವಹಿಸುತ್ತಿವೆ. |
| 2. | ವಿದ್ಯಾರ್ಥಿ ವೇತನ ಸೌಲಭ್ಯ. | **ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗಗಳ** 1 ರಿಂದ 10ನೇ ವರ್ಗದವರೆಗೆ ಓದುವ ಎಲ್ಲಾ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಶಿಷ್ಯವೇತನ, ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ಶಿಷ್ಯವೇತನ ಮತ್ತು ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪಾಲಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ಶಿಷ್ಯ ವೇತನ್ನವನ್ನು ಆನ್‌ಲೈನ್ ಮುಖಾಂತರ ಮಂಜೂರು ಮಾಡಲಾಗುತ್ತಿದೆ. |
| 3. | ಬಹುಮಾನ ಧನ | ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಪ್ರಥಮ ಬಾರಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಹುಮಾನಧನ ಮಂಜೂರು ಮಾಡಲಾಗುತ್ತಿದೆ. |
| 4. | ಬುಕ್ ಬ್ಯಾಂಕ್ | ವೈದ್ಯಕೀಯ,ಇಂಜನೀಯರಿಂಗ್ ಮತ್ತು ಎಂ.ಬಿ.ಎ ಹಾಗೂ ಇತರ ವೃತ್ತಿಪರ ಕೋರ್ಸುಗಳು ನಡೆಯುತ್ತಿರುವ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುತ್ತಿದೆ. |
| 5. | ಕಾನೂನು ಪದವೀಧರರಿಗೆ ತರಬೇತಿ ಮತ್ತು ಸಹಾಯಧನ. | ಕಾನೂನು ಪದವೀಧರರು ಸ್ವತಂತ್ರವಾಗಿ ವಕೀಲ ವೃತ್ತಿಯಲ್ಲಿ ತೊಡಗಲು ಸಹಾಯವಾಗುವಂತೆ ತರಬೇತಿಗೆ ನಿಯೋಜಿಸಿ ಮಾಹೆಯಾನ ₹.2000–00ಗಳ ಪ್ರಕಾರ 4 ವರ್ಷಗಳ ಕಾಲ ಶಿಷ್ಯವೇತನ ನೀಡಲಾಗುವುದು. ಕಾನೂನು ಪಧವೀಧರರಿಗೆ ₹.5000/–ಗಳ ಸಹಾಯಧನ ಮಂಜೂರುಮಾಡಿ ಅದರಲ್ಲಿ ₹.460–00 ನೊಂದಣಿ ಶುಲ್ಕ ಹಾಗೂ ₹.4540/–ಗಳಿಂದ ಕಾನೂನು ಪುಸ್ತಕಗಳನ್ನು ಖರೀದಿಸಿ ಕೊಡಲಾಗುವುದು. |
| 6. | ಅಸ್ಪೃಶ್ಯತಾ ನಿವಾರಣ ಮತ್ತು ಅಂತರಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ. | ಅಸ್ಪೃಶ್ಯತಾ ನಿವಾರಣೆ ಯೋಜನೆಯಡಿ ಅಂತರ ಜಾತಿ ವಿವಾಹಿತರಾದ ದಂಪತಿಗಳಿಗೆ ₹.50,000–00 ಪ್ರೋತ್ಸಾಹ ಧನ ಮಂಜೂರ ಮಾಡಲಾಗುತ್ತಿದೆ. |
| 7. | ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಸಂತ್ರಸ್ಥರಿಗೆ ಪರಿಹಾರಧನ. | ದೌರ್ಜನ್ಯ ಪ್ರಕರಣಗಳಲ್ಲಿ ನೊಂದ **ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ** ಜನರಿಗೆ ದೌರ್ಜನ್ಯದ ತೀವ್ರತೆ ಮತ್ತು ಅದರ ಸ್ವರೂಪವನ್ನನುಸರಿಸಿ ಪರಿಹಾರಧನ ಮತ್ತು ಪುನರ್ವಸತಿ. |
| 8. | ನರ್ಸಿಂಗ್ ತರಬೇತಿ | ವೃತ್ತಿ ಆಧಾರಿತ ತರಬೇತಿ ನೀಡುವ ದಿಸೆಯಲ್ಲಿ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಇಚ್ಚಿಸುವ ಪ.ಜಾತಿ ವಿದ್ಯಾರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಸರ್ಕಾರ ನಿಗಧಿಪಡಿಸಿದ ಶಾಲಾ ಫೀ ಮತ್ತು ನಿರ್ವಹಣಾ ವೆಚ್ಚವನ್ನು ಇಲಾಖೆಯಿಂದ ಭರಿಸಲಾಗುತ್ತದೆ. |

| | | |
|---|---|---|
| 9. | ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ | ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆಯ ಮೂಲಕ ಪ್ರವೇಶಾವಕಾಶ ಕಲ್ಪಿಸಿ ಅವರಿಗೆ ವಾರ್ಷಿಕ ಗರಿಷ್ಠ ₹.50,000=00ಗಳನ್ನು ಶಾಲೆಗಳಿಗೆ ಸಂದಾಯ ಮಾಡಲಾಗುತ್ತಿದೆ. |
| 10. | ವಿಶೇಷ ಘಟಕ ಯೋಜನೆ<br>(ಪರಿಶಿಷ್ಟ ಜಾತಿ ಕುಟುಂಬಗಳಿಗೆ ಸಹಾಯ ಹಾಗೂ ಕಾಲೋನಿಗಳಿಗೆ ಮೂಲಭೂತ ಸೌಕರ್ಯ) | **ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ** ಜನರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ಸ್ವಯಂ ಉದ್ಯೋಗ ಹೊಂದಲು ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸಹಕಾರದೊಂದಿಗೆ ರಾಜ್ಯ ಮತ್ತು ಜಿಲ್ಲಾ ವಲಯದಲ್ಲಿ ಈ ಕೆಳಗಿನ ವಿವಿಧ ಅಭಿವೃದ್ಧಿ ಇಲಾಖೆಗಳ ಮೂಲಕ ಸಹಾಯಧನ ವನ್ನು ಒದಗಿಸಿ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತಿದೆ.<br><br>• ಸಮಾಜ ಕಲ್ಯಾಣ:– ರಾಜ್ಯ ವಲಯದ ಪರಿಶಿಷ್ಟ ಜಾತಿ ಉಪಯೋಜನೆಯ ಕ್ರೋಢೀಕೃತ ಅನುದಾನದಲ್ಲಿ ರಸ್ತೆ,ಚರಂಡಿ ಮತ್ತು ವಿವಿಧ ಸಮುದಾಯ ಭವನಗಳ ನಿರ್ಮಾಣ.<br>• ಕೃಷಿ– ಬಿತ್ತನೆ ಬೀಜ ಮತ್ತು ಇತರೆ ಸಲಕರಣೆಗಳ ವಿತರಣೆ ,ಸಾವಯವ ಕೃಷಿ,ಕಾಪು ದಾಸ್ತಾನು ರಸಗೊಬ್ಬರ ಸಹಾಯಧನ,ಲಘು ನೀರಾವರಿ,<br>• ತೋಟಗಾರಿಕೆ:– ಹನಿ ನೀರಾವರಿ,ಸಮಗ್ರ ತೋಟ ಅಭಿವೃದ್ಧಿ,ರಾಷ್ಟ್ರೀಯ ತೋಟಗಾರಿಕೆ ಮಿಷನ್ ರಾಜ್ಯದ ಪಾಲು,ರಾಷ್ಟ್ರೀಯ ಕೃಷಿವಿಕಾಸ ಯೋಜನೆ<br>• ಪಶು ಸಂಗೋಪನೆ:– ಹೈನುಗಾರಿಕೆಗೆ ಎಮ್ಮೆ ಘಟಕ ನಿರ್ಮಾಣ.<br>• ರೇಷ್ಮೆ:– ರೇಷ್ಮೆ ಬೆಳೆಗಾರರಿಗೆ ಸಹಾಯಧನ,ರೇಷ್ಮೆಅಭಿವೃದ್ಧಿ.<br>• ಮೀನುಗಾರಿಕೆ:– ಮತ್ಸ್ಯ ಆಶ್ರಯ,ಮೀನುಗಾರಿಕಾ ಅಭಿವೃದ್ಧಿ, ಮೀನು ಮರಿಗಳ ಉತ್ಪಾದನೆಗೆ ಸಹಾಯಧನ.<br>• ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್:– ಸುವರ್ಣ ಗ್ರಾಮ,ಜಿಲ್ಲಾ ಪಂಚಾಯತ್ ಕೆರೆಗಳ ಪುನರುಜ್ಜೀವನ,ಪಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ,ಗ್ರಾಮೀಣ ರಸ್ತೆ ಅಭಿವೃದ್ಧಿ,ಗ್ರಾಮೀಣ ಸಂಪರ್ಕ, ಗ್ರಾಮೀಣ ನೀರು ಸರಬರಾಜು.<br>• ಅರಣ್ಯ:– ಸಾಮಾಜಿಕ ಅರಣ್ಯ ಅಭಿವೃದ್ಧಿ, ಸರಳವಲಯ, ಸಸಿ ವಿತರಣೆ ಇತ್ಯಾದಿ.<br>• ಸಹಕಾರ:– ನಬಾರ್ಡ್ ಯೋಜನೆಗೆ ಸಹಾಯಧನ,ಡಿಬೆಂಚರ್‌ಗಳನ್ನು ಖರೀದಿಸಲು ಸಾಲ,ಬೆಳೆಸಾಲಕ್ಕಾಗಿ ಸಹಾಯಧನ,ಸ್ವಸಹಾಯ ಸಂಘಗಳಿಗೆ ಸಾಲ,ಯಶಸ್ವಿನಿ, ಸಹಕಾರ ಸಂಸ್ಥೆಗಳಿಗೆ ನೆರವು.<br>• ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:– ದೇವದಾಸಿ ಮಹಿಳೆಯರ ಪುನರ್ವಸತಿ, ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ತರಬೇತಿ ಕಾರ್ಯಕ್ರಮಗಳು,ಭಾಗ್ಯಲಕ್ಷ್ಮೀ,ಉದ್ಯೋಗಿನಿ ಯೋಜನೆ,ಸ್ತ್ರೀ ಶಕ್ತಿ,ದೇವದಾಸಿ ಮಹಿಳೆಯರಿಗೆ ಪಿಂಚಣಿ ಯೋಜನೆ.<br>• ಪ್ರವಾಸೋದ್ಯಮ ಇಲಾಖೆ:– ಪ್ರವಾಸೋದ್ಯಮ ನಿಗಮದ ಮೂಲಕ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ, ಟೂರಿಸ್ಟ್ ಬ್ಯೂರೋ, ಪ್ರವಾಸಿ ತಾಣಗಳ ಅಭಿವೃದ್ಧಿ,ಪ್ರವಾಸಿ ಟ್ಯಾಕ್ಸಿ ಖರೀದಿಗೆ 50%ರಷ್ಟು ಸಹಾಯಧನ. |

| | | |
|---|---|---|
| | | • ಯುವಜನಸೇವೆ ಮತ್ತು ಕ್ರೀಡಾ ಇಲಾಖೆ:– ಆಟದ ಮೈದಾನ ಅಭಿವೃದ್ಧಿ, ಸಮುದಾಯ ಭವನಗಳ ನಿರ್ಮಾಣ.<br>• ವಸತಿ:– ವಾಜಪೇಯಿ ವಸತಿ ಯೋಜನೆ, ಮನೆ ಮತ್ತು ನಿವೇಶನ, ಆಶ್ರಯ/ಇಂದಿರಾ ಆವಾಸ್/ಅಂಬೇಡ್ಕರ್ ವಸತಿ ಯೋಜನೆ.<br>• ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ:– ಪಂಚ ಸೌಲಭ್ಯ,ಅಕ್ಷರ ದಾಸೋಹ,ವಿದ್ಯಾ ವಿಕಾಸ ಯೋಜನೆ.<br>• ಕೈಗಾರಿಕೆ ಮತ್ತು ವಾಣಿಜ್ಯ:– ಕೈಗಾರಿಕಾ ತರಬೇತಿ ಕಾರ್ಯಕ್ರಮಗಳು,ಕೈಗಾರಿಕಾ ವಿಕಾಸ,ಕೌಶಲ್ಯ ಅಭಿವೃದ್ಧಿ ಯೋಜನೆ,ಖಾದಿ ಮತ್ತು ಗ್ರಾಮೋದ್ಯೋಗ ಉತ್ಪಾದನೆಗೆ ಸಹಾಯಧನ.<br>• ಸಣ್ಣ ನೀರಾವರಿ:– ನೀರು ಸಂಗ್ರಹಣಾ ತೊಟ್ಟಿಗಳ ಪುನರುಜ್ಜೀವನ. ರಾಜ್ಯ ವಲಯದ ಅನುದಾನದಡಿ ವಿವಿಧ ಅಭಿವೃದ್ಧಿ ಯೋಜನೆಗಳು.<br>• ಆರೋಗ್ಯ:– ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು/ಶಿಕ್ಷಕರಿಗೆ ಯೋಗ ಶಿಬಿರ ಆಯೋಜನೆ,ತಾಲ್ಲೂಕು/ಜಿಲ್ಲಾ ಮಟ್ಟದ ಆಯುಷ್ ಸೆಮಿನಾರ್ ಗಳು, ಮನೆಮದ್ದು,ಸ್ವಸ್ಥವೃತ್ತ, ಆಯುಷ್ ಅರಿವು ಕಾರ್ಯಕ್ರಮ, ಶಾಲಾ ಆರೋಗ್ಯ ಕಾರ್ಯಕ್ರಮ, ಔಷಧಿ ಗಿಡಗಳ ಮೂಲಕ ಸೊಳ್ಳೆ ಹರಡುವಿಕೆ ನಿಯಂತ್ರಣ ಕಾರ್ಯಕ್ರಮ.<br>• ಕನ್ನಡ ಮತ್ತು ಸಂಸ್ಕೃತಿ ಇಲಾಖೆ:– ಕಲಾವಿದರಿಗೆ ವಾದ್ಯ ಪರಿಕರಗಳ ವಿತರಣೆ, ಸಾಂಸ್ಕೃತಿಕ ಭವನ ನಿರ್ಮಾಣ, ಕಲಾ ಶಿಬಿರ ಆಯೋಜನೆ. |
| 11. | ನಿರಾಶ್ರಿತ ಪರಿಹಾರ ಕೇಂದ್ರ | ಭಿಕ್ಷಾಟನೆ ನಿರ್ಮೂಲನೆ ಕಾಯ್ದೆಯ ಅನುಷ್ಠಾನಕ್ಕಾಗಿ ಭಿಕ್ಷಾಟನೆ ಮಾಡುವ ಜನರನ್ನು ಸದರಿ ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ದಾಖಲಿಸಿ ಅವರ ಮಾನಸಿಕ ಪರಿವರ್ತನೆ ಮಾಡಿ ಭಿಕ್ಷಾಟನೆ ಮಾಡದಂತೆ ಅವರಿಗೆ ಪುನರ್ವಸತಿ ಕಲ್ಪಿಸಲಾಗುತ್ತಿದೆ. |

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ** ಜನರ ಸರ್ವತೋಮುಖ ಅಭಿವೃದ್ಧಿ, ರಕ್ಷಣೆ ಮತ್ತು ವಿವಿಧ ರೀತಿಯ ಯೋಜನೆಗಳ ಶೀಘ್ರ ಅನುಷ್ಠಾನ, ಕೇಂದ್ರ ಹಾಗೂ ರಾಜ್ಯ ಸರ್ಕಾರವು **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ** ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಹೆಚ್ಚಿನ ಗಮನಹರಿಸಿ ಸಾಮಾಜಿಕ ನ್ಯಾಯ ಮತ್ತು ಇತರೆ ದೌರ್ಜನ್ಯಗಳಿಂದ ಪೂರ್ಣ ಮತ್ತು ನಿರ್ದಿಷ್ಟ ರಕ್ಷಣೆ ನೀಡಲು ಸಮಾಜ ಕಲ್ಯಾಣ **ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳಿಂದ** ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

* ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು, ಬೆಳಗಾವಿ/ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು, ಬೆಳಗಾವಿ ಅಥವಾ ಸಂಬಂಧಪಟ್ಟ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳನ್ನು ಸಂಪರ್ಕಿಸಬಹುದು.